# ಬಿಸಿತುಪ್ಪ

■ ವಸುಮತಿ ಉಡುಪ

ಕಲೆ: ಸಂತೋಷ್ ಸಸಿಹಿತ್ಲು



ಜಾತಕದಲ್ಲಿ ಪೂರ್ವಪುಣ್ಯಸ್ಥಾನ ಅನ್ನುವುದೊಂದಿರುತ್ತದೆಯಂತೆ. ಅದು ನಿಜ ಅನ್ನುವ ಹಾಗೆ ಪ್ರಸನ್ನ ಮತ್ತು ಪಂಕಜಾಕ್ಷಿ ದಂಪತಿಯ ಬದುಕು ಯಾವ ಏರಿಳಿತಗಳಿಗೂ ಪಕ್ಕಾಗದೆ ಸರಳರೇಖೆಯಂತೆ ನಡೆದುಕೊಂಡು ಬಂದಿತ್ತು, ಪರಿಚಯಸ್ಥರು ಕರುಬುವಂತೆ. ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಇಂಜಿನಿಯರ್ ಆಗಿ ನಿವೃತ್ತಿಯ ಅಂಚಿಗೆ ಬಂದಿದ್ದ ಪ್ರಸನ್ನ. ಪತ್ನಿ ಪಂಕಜಾಕ್ಷಿ ಗೃಹಕೃತ್ಯದ ಹೊಣೆ ಹೊತ್ತು ಸಮರ್ಥವಾಗಿ ನಿಭಾಯಿಸಿದ್ದಾಳೆ. ಇಬ್ಬರು ಮಕ್ಕಳನ್ನು ಯೋಗ್ಯರನ್ನಾಗಿ ಬೆಳೆಸಿದ್ದಾಳೆ. ಹಿರಿಯ ಹುಡುಗಿ, ಕಿರಿಯ ಹುಡುಗ ಇಬ್ಬರೂ ಇಂಜಿನಿಯರಿಂಗ್ ಪದವೀಧರರು. ಮಗಳಿಗೆ ಮದುವೆಯಾಗಿ ಅವಳು ವಿದೇಶದಲ್ಲಿ ನೆಲೆಸಿದ್ದಾಳೆ. ಸ್ವಂತವಾಗಿ ಕಟ್ಟಿಕೊಂಡಿರುವ ಸಕಲಾನುಕೂಲಗಳಿಂದ ಸಜ್ಜುಗೊಂಡಿರುವ ಸ್ವಗೃಹದಲ್ಲಿ ವಾಸ. ಮಗನಿಗೆ ಒಳ್ಳೆಯ ಕಂಪನಿಯಲ್ಲಿ ಕೆಲಸ. ಕೈ ತುಂಬಿ ಚೆಲ್ಲುವಷ್ಟು ಸಂಬಳ. 'ಅಕ್ಕನ ಹಾಗೆ ಎಂ.ಎಸ್. ಮಾಡ್ಬೇಕೂಂತ ಆಸೆ ಇದ್ರೆ ಅಮೆರಿಕಕ್ಕೆ ನಡಿ. ನಮ್ಮ ಯೋಚನೆ ಮಾಡ್ಬೇಡ. ನಮ್ಮನ್ನ ನಾವು ನೋಡ್ಕೊಳ್ಳೋವಷ್ಟು ಸದ್ಯಕ್ಕಂತೂ ಗಟ್ಟಿಯಾಗಿದೀವಿ' ಎಂದು ಅಪ್ಪ, ಅಮ್ಮ ಹೇಳಿಟ್ಟಿದ್ದಾರೆ. ಆ ಬಗ್ಗೆ ಪ್ರಸಾದನಿಗೆ ಮಹತ್ವಾಕಾಂಕ್ಷೆ ಇಲ್ಲ.

'ನಾನು ಎಲ್ಲಿಗೂ ಹೋಗಲ್ಲ. ನಿಮ್ಮನ್ನ ನೋಡ್ಕಂಡು ನಿಮ್ಮ ಜೊತೇನೇ ಇರ್ತೀನಿ. ಮುಂದೆ ಬರ್ಬೇಕೂಂದ್ರೆ ನಮ್ಮ ದೇಶದಲ್ಲೂ ಬೇಕಾದಷ್ಟು ಅವಕಾಶಗಳಿದಾವೆ' ಎಂದಿದ್ದ ಪ್ರಸಾದ. ಹೀಗಾಗಿ ಮುಂದೆಂದೋ ತಮಗೆ ಒದಗಬಹುದಾದ ಅನಾಥಪ್ರಜ್ಞೆಯಿಂದ ಕೂಡಾ ಪಾರಾಗಿದ್ದರು ದಂಪತಿ. ನಿಶ್ಚಿಂತೆಯಾಗಿ ಬದುಕು ನಡೆಸುತ್ತಿದ್ದರು.

ಪ್ರಸಾದನಿಗೆ ಇಪ್ಪತ್ತೈದು ತುಂಬಿ ಇಪ್ಪತ್ತಾರಕ್ಕೆ ಬಿದ್ದಾಗ ಅವನಿಗೊಂದು ಮದುವೆ ಮಾಡಿ ಚಂದ ನೋಡುವ ಯೋಚನೆ ದಂಪತಿಯ ಮನಸ್ಸಲ್ಲಿ ಗಟ್ಟಿಯಾಯ್ತು. ಓದುಗರಾದ ನೀವು ಮುಂದೇನು ಯೋಚಿಸುತ್ತಿದ್ದೀರಿ, ಕಲ್ಪನೆಯ ಕುದುರೆಯನ್ನು ಎಷ್ಟು ವೇಗವಾಗಿ ಓಡಿಸುತ್ತಿದ್ದೀರಿ ಎನ್ನುವ ಬಗ್ಗೆ ನಿರೂಪಕರಿಗೆ ಗೊತ್ತೇ ಇರುತ್ತದೆ. ಮನೆಗೆ ಬಂದ ಸೊಸೆ ಅತ್ತೆ, ಮಾವನೊಂದಿಗೆ ಹೊಂದಿಕೊಳ್ಳಲಿಲ್ಲ. ಬೇರೆ ಮನೆ ಮಾಡಬೇಕೆಂದು ಸತ್ಯಾಗ್ರಹ ಮಾಡಿದಳು. ತೌರುಮನೆಗೆ ಹೋಗಿ ಕೂತಳು. ಮಗನ ಬಾಳು ಹಾಳಾಗಬಾರದೆಂಬ ಉದ್ದೇಶದಿಂದ ಹೆತ್ತವರು ಅವನು ಬೇರೆ ಮನೆ ಮಾಡಲು ತಾವೇ ಪ್ರೋತ್ಸಾಹದ ಮಾತಾಡಿದರು. ಮಗ ನಿಧಾನಕ್ಕೆ ಹೆತ್ತವರಿಂದ ದೂರಾಗುತ್ತಾ ಬಂದ. ಅಥವಾ ತಾವೂ ಪರದೇಶಕ್ಕೆ ಹೋಗೋಣವೆಂದು ಮಗನನ್ನು ಪೀಡಿಸಿ ಅವನನ್ನು ಹೊರಡಿಸಿಕೊಂಡು, ಇವೆಲ್ಲಾ ಎಲ್ಲರೂ ಅಂದುಕೊಳ್ಳುವ ಮಾಮೂಲಿ ಕತೆ. ಆದರೆ ಇಲ್ಲಿ ನಡೆದಿದ್ದೇ ಬೇರೆ.

***

ಕಲ್ಪನಾ ಆ ಮನೆಯ ಸೊಸೆಯಾಗಿ ಮನೆ ತುಂಬಿದಳು. ಒಬ್ಬಳೇ ಮಗಳಾದ್ದರಿಂದ ಮುಂದೆ ಅಪ್ಪ, ಅಮ್ಮನಿಗೆ ಆಸರೆಯಾಗಬೇಕಾದವಳು ತಾನೇ ಎನ್ನುವ ಅರಿವಿದ್ದ ಹುಡುಗಿ. 'ಪ್ರಸಾದನಿಗೆ ವಿದೇಶದ ಚಪಲವಿಲ್ಲ' ಎನ್ನುವುದನ್ನು ಮೊದಲೇ ಮಾತಾಡಿಕೊಂಡು ಮದುವೆಗೆ ಹಸಿರುನಿಶಾನೆ ತೋರಿಸಿದ್ದಳು. ಹಾಲು, ಸಕ್ಕರೆಯಂತೆ ಹೊಂದಿಕೊಳ್ಳುವ ತಮ್ಮ ಮನೋಧರ್ಮದ ಕುರಿತು ಪ್ರಸಾದನಿಗೆ ಪರಮ ಸಂತೃಪ್ತಿ. ತಂತಮ್ಮ ಹೆತ್ತವರನ್ನು ಇಳಿಗಾಲದಲ್ಲಿ ಸುಖವಾಗಿಟ್ಟುಕೊಳ್ಳಬೇಕೆಂಬುದು ಇಬ್ಬರ ಕನಸು. ಇಬ್ಬರ ಧ್ಯೇಯ. ಇಬ್ಬರ ಉತ್ಕಟೇಚ್ಛೆ.

***

'ಇದು ಹೀಗಾಗಬಹುದು' ಎಂದು ಕನಸಲ್ಲೂ ಎಣಿಸಿರಲಿಲ್ಲ ಪ್ರಸಾದನ ಅಪ್ಪ, ಅಮ್ಮ. ಬೀಗರಾದವರು ಒಳ್ಳೆಯ ಜನ. ಸ್ನೇಹಪೂರ್ಣ ವ್ಯಕ್ತಿತ್ವದವರು. ಯಾರೊಡನೆ ಬೇಕಾದರೂ ಹೊಂದಿಕೊಳ್ಳುವ ಸುಸ್ವಭಾವದವರು.

ಅಡುಗೆಮನೆಯಿಂದ ದೂರ ಸರಿಯುವ ಸ್ವಭಾವದವಳಲ್ಲ ಕಲ್ಪನಾ. ಬದಲಿಗೆ

'ತಾವು ಇರುವುದು ಸ್ವಂತ ಮನೆಯಲ್ಲಲ್ಲ, ನೆಂಟರ ಮನೆಯಲ್ಲಿ' ಎಂದು ಹೆಣ್ಣು ಕೊಟ್ಟವರು ಅರ್ಥ ಮಾಡಿಕೊಳ್ಳಬೇಕಾದ್ದು ಅವರ ಲೌಕಿಕಜ್ಞಾನಕ್ಕೆ ಸಂಬಂಧಿಸಿದ್ದು. ಮನೆಯಲ್ಲಿ ಒಂದೋ, ಎರಡೋ ಮಕ್ಕಳಿರುವ ಕಾಲಮಾನದಲ್ಲಿ ಹೆಣ್ಣುಮಗಳನ್ನು ಮದುವೆ ಮಾಡಿ ಕಳಿಸಿಕೊಟ್ಟ ನಂತರ ತಾವು ತಾವೇ ಇರುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು ಎಂದು ಹೇಳುವುದು, ಯೋಚಿಸುವುದೂ ಕೂಡ ತಪ್ಪಾಗಿಬಿಡುತ್ತದೆ.